

## ಯಾವ ಶಿಲ್ಪಿ ಕಡೆದ ರಚನೆ ನೀನು...

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ದಾರಿಯಲ್ಲಿ ಕಾಣಸಿಗುವ ಹನುಮಾನ್ ಗುಂಡಿ ಜಲಪಾತದ ಇಳಿಜಾರು ಪ್ರದೇಶದಲ್ಲಿ ಕಂಡ ಬೃಹತ್ ಕಾಡ ಅತ್ತಿಮರವಿದು. ವಿಶಿಷ್ಟ ರಚನೆಯ ಮೂಲಕ ನೋಡುಗರ ಗಮನ ಸೆಳೆಯುತ್ತಿದೆ. ಋತುಮಾನಗಳು ತಂದೊಡ್ಡಿದ ಅದೆಷ್ಟೋ ನೈಸರ್ಗಿಕ ವೈಪರೀತ್ಯಗಳನ್ನು ತಡೆದು ನಿಂತಿದೆ. ಮಳೆಗಾಲದಲ್ಲಿ ಗುಡ್ಡದ ಮೇಲಿಂದ ಧುಮುಕುವ ಜಲಧಾರೆಯು ಬೇರುಗಳ ಮಧ್ಯೆ ನುಸುಳಿ ಈ ರಚನೆ ನಿರ್ಮಾಣಗೊಂಡಿದೆ. ಮಣ್ಣು ಕರಗಿಸಿ ತನ್ನೊಡನೆ ಜಲಪಾತಕ್ಕೆ ಸೇರಿಸಿದಾಗ ತನ್ನ ಉಳಿಯುವಿಕೆಗಾಗಿ ಬೇರುಗಳನ್ನು ಚಾಚುತ್ತಾ ಅದನ್ನೇ ಕಂಬದಂತೆ ಪ್ರತಿಷ್ಠಾಪಿಸಿದೆ ಈ ಮರ. ಇದೇ ಆಧಾರದ ಮೇಲೆ ಕಾಂಡ ಬೆಳೆಸಿದ ಈ ಮರದ ಪರಿ ಎಲ್ಲರನ್ನೂ ನಿಬ್ಬೆರಗಾಗಿಸುತ್ತದೆ. ಈ ಎಲ್ಲ ನಿಸ್ವಾರ್ಥ ಶ್ರಮವು ಭೂಮಿಗೆ ನೆರಳು, ಗಾಳಿಯನ್ನು ಒದಗಿಸಿದೆ ಎಂಬುದನ್ನು ಮರೆಯಲಾಗದು.

–ಮಹಮ್ಮದ್, ಮೂಡುಬಿದಿರೆ

## ಪ್ರಕೃತಿಯ ವಿಸ್ಮಯ ಕಲಾಕೃತಿ

ಈ ಹೋಯಾ ಗಿಡವು ಕೇವಲ ಮನೆಯ ಅಲಂಕಾರಕ್ಕಾಗಿಯೇ ಅಲ್ಲ, ಮನಸ್ಸಿಗೂ ನೆಮ್ಮದಿಯನ್ನು ತರುತ್ತದೆ. ಇದರ ಹೂಗಳು ಗೋಲುಗೋಲಾಗಿ ತೂಗಿ ಬೀಳುತ್ತವೆ; ಅವನ್ನು ನೋಡಿದಾಗ ಮುತ್ತಿನ ಗುಂಡುಗಳು ಕ್ರಮವಾಗಿ ಜೋಡಿಸಿಟ್ಟಂತೆ ಕಾಣಿಸುತ್ತವೆ. ಪ್ರತಿಯೊಂದು ಹೂವೂ ನಕ್ಷತ್ರದ ಆಕಾರದಲ್ಲಿ ಇದ್ದು, ಪ್ರಕೃತಿಯ ವಿಸ್ಮಯ ಕಲಾಕೃತಿಯನ್ನು ತೋರುತ್ತವೆ. ದಪ್ಪವಾದ ಹಸಿರು ಎಲೆಗಳು ಗಿಡಕ್ಕೆ ಸುಂದರ ರೂಪವನ್ನು ಕೊಡುತ್ತವೆ. ಹಸಿರು ಎಲೆಗಳ ನಡುವೆ ಮಿನುಗುವ ಆ ನಕ್ಷತ್ರಾಕಾರದ ಹೂಗಳು ಮನಸಿಗೆ ಮುದ ನೀಡುತ್ತವೆ. ಈ ಒಳಾಂಗಣ ಗಿಡವು ಒತ್ತಡವನ್ನು ಕಡಿಮೆ ಮಾಡುವಲ್ಲಿ ಸಹಕಾರಿ ಎಂದು ಹೇಳಲಾಗಿದೆ. ಈ ಗಿಡಕ್ಕೆ ಹೆಚ್ಚು ಕಾಳಜಿ ಬೇಕಾಗಿಲ್ಲ—ಸ್ವಲ್ಪ ಸೂರ್ಯನ ಬೆಳಕು, ಮಿತವಾದ ನೀರು, ಮತ್ತು ಸರಳವಾದ ಕಾಳಜಿ ಸಾಕು.

ಹೋಯಾ ಗಿಡವು ಎಲ್ಲಾ ರೀತಿಯ ಹವಾಮಾನಕ್ಕೆ ಹೊಂದಿಕೊಳ್ಳುವುದರಿಂದ ವೈಪರೀತ್ಯದಿಂದ ಹೆಚ್ಚು ಹಾನಿ ಆಗುವುದಿಲ್ಲ. ಇದು ಕಡಿಮೆ ಕಾಳಜಿಯೊಂದಿಗೆ ಬೆಳೆಯುವುದರಿಂದ, ಎಲ್ಲೆಡೆ ಸುಲಭವಾಗಿ ಬೆಳೆಯಬಹುದಾಗಿದೆ. ಆದ್ದರಿಂದ ಮನೆಯೊಳಗಿನ ಪರಿಸರ, ವೈಜ್ಞಾನಿಕ ಪ್ರಯೋಜನ ಮತ್ತು ಆರೋಗ್ಯದ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾಗಿದೆ. ಒಟ್ಟಾರೆ, ಹೋಯಾ ಗಿಡವು ಗಾಳಿಯನ್ನು ಶುದ್ಧಗೊಳಿಸುವುದು, ಮನಸ್ಸಿನ ಒತ್ತಡ ಕಡಿಮೆ ಮಾಡುವುದು, ತಾಪಮಾನ ನಿಯಂತ್ರಣ ಮಾಡುವುದು ಮತ್ತು ಪರಿಸರಸ್ನೇಹಿ ಪರಿಣಾಮ ನೀಡುವುದು ಸೇರಿದಂತೆ ಹಲವಾರು ವೈಜ್ಞಾನಿಕ ಹಾಗೂ ಪರಿಸರ ಪ್ರಯೋಜನಗಳನ್ನು ಹೊಂದಿದೆ.

–ವಿಜಯಕುಮಾರ್ ಎಚ್.ಕೆ., ರಾಯಚೂರು



## ಕ್ರಿಸ್‌ಮಸ್ ಮರ

ಕ್ರಿಸ್‌ಮಸ್ ಎಂದರೆ ವರ್ಷದ ಸಂಭ್ರಮ. ಕ್ರಿಸ್‌ಮಸ್ ಮರ ಎಂದರೆ ಕ್ರಿಸ್‌ಮಸ್ ಹಬ್ಬದ ಸಮಯದಲ್ಲಿ ಅಲಂಕರಿಸಲಾಗುವ ಒಂದು ಮರ. ಕ್ರಿಸ್‌ಮಸ್ ಹಬ್ಬದ ಸಮಯದಲ್ಲಿ ಇದನ್ನು ಮನೆಗಳಲ್ಲಿ, ಕಚೇರಿಗಳಲ್ಲಿ, ಮಾಲ್‌ಗಳಲ್ಲಿ ಅಲಂಕರಿಸಲಾಗುತ್ತದೆ. ಹಸಿರು ವರ್ಣದ ನಿತ್ಯಹರಿದ್ವರ್ಣದ ಪೈನ್ ಮರವನ್ನು ಇದಕ್ಕೆ ಬಳಸಲಾಗುತ್ತದೆ. ಇದನ್ನು ಅಲಂಕರಿಸಲು ಬಣ್ಣ ಬಣ್ಣದ ಚೆಂಡುಗಳು, ನಕ್ಷತ್ರಗಳು, ಕ್ಯಾಂಡಿಗಳು, ಸಾಂತಾ ಕ್ಲಾಸ್ ಮುಖಗಳು, ದೀಪಗಳು ಮುಂತಾದವುಗಳನ್ನು ಬಳಸುತ್ತಾರೆ. ಅವುಗಳೆಲ್ಲವೂ ಪ್ಲಾಸ್ಟಿಕ್ ವಸ್ತುಗಳಾಗಿದ್ದವು. ಚಿತ್ರದಲ್ಲಿ ಕಾಣುತ್ತಿರುವುದು ಬಣ್ಣ ಬಣ್ಣದ ಉಲ್ಲನ್ ಬಳಸಿ ಕ್ರೋಶಾಕಡ್ಡಿ ಸಹಾಯದಿಂದ ತಯಾರಿಸಿದ ಕ್ರಿಸ್‌ಮಸ್ ಥೀಮ್. ಹಬ್ಬ ಹರಿದಿನಗಳು ಗೃಹಿಣಿಯರ ಮತ್ತು ಮಕ್ಕಳ ಸೃಜನಶೀಲತೆ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುತ್ತವೆ. ಅದನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು. ಪ್ಲಾಸ್ಟಿಕ್ ಬಳಕೆ ಮಾಡಬಾರದೆಂಬ ನಿಲುವಿನೊಂದಿಗೆ ಈ ಉಲ್ಲನ್ ಉಡುಪುಗಳನ್ನು ತಯಾರಿಸಲಾಗಿದೆ. ಇನ್ನು ಇವುಗಳ ತಯಾರಿಕೆಗೆ ಕಡಿಮೆ ಪ್ರಮಾಣದ ಉಲ್ಲನ್ ಇದ್ದರೂ ಸಾಕು. ವಿನೂತನವಾಗಿ ಬಳಸಿಕೊಳ್ಳಬಹುದು. ಕ್ರೋಶಾ ಹಾಕುವುದು ಸುಲಭ. ಇಂಥವುಗಳನ್ನು ತಯಾರಿಸಿ ಮಕ್ಕಳಿಗೂ ಉಡುಗೊರೆಯಾಗಿ ನೀಡಬಹುದು.

–ವೀಣಾ ಶಂಕರ್,
ಬೆಂಗಳೂರು

